# IN THE COURT OF THE ADDL. SENIOR CIVIL JUDGE & JMFC., GUBBI

# **OS – 210/2023**

Witness present and duly sworn on : 16.01.2025

Further cross Examination: by Counsel for Defendants :

ನೊಂದಣಿ ಸಂಖ್ಯೆ 7421/1976-77 ಕ್ರಯಪತ್ರದಲ್ಲಿ ಪೂರ್ವಕ್ಕೆ ಇದ್ದ ಚಿಕ್ಕನರಸಯ್ಯ ನನ್ನ ಮುತ್ತಾತ. ಸದರಿ ಚಿಕ್ಕನರಸಯ್ಯ ನನ್ನ ಮುತ್ತಾತ ಅಲ್ಲ ಎಂದರೆ ಸರಿಯಲ್ಲ. ಮೊಹಮ್ಮದ್ ಅಯಾತ್ ರವರ ಮಗ ಮಲ್ಲಿಕ್ ಅಹಮ್ಮದ್ ಜೀವಂತ ಇದ್ದಾರೆ. ಸರ್ವೆ ನಂ.66 ರಲ್ಲಿ ನನ್ನ ಪಕ್ಕದ ಜಮೀನು ಮಲ್ಲಿಕ್ ಅಹಮ್ಮದ್ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನೊಂದಣಿ ಸಂಖ್ಯೆ 7421/1976-77 ಕ್ರಯಪತ್ರದ ಪೂರ್ವಕ್ಕೆ ಇರುವ ಚಿಕ್ಕನರಸಯ್ಯನವರು ನಾಗಸಂದ್ರ ಗ್ರಾಮದ ನಿವಾಸಿ ಎಂದರೆ ಸರಿಯಲ್ಲ. ಅವರು ನಾಗಸಂದ್ರದ ಗ್ರಾಮದಿಂದ ಬಂದು ಹೆರೂರು ಗ್ರಾಮದಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಸದರಿ ವಿಚಾರದ ಬಗ್ಗೆ ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನೊಂದಣಿ ಸಂಖ್ಯೆ 846/1987-88 ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಚಿಕ್ಕನರಸಯ್ಯ ರವರು ನಾಗಸಂದ್ರದವರು ಎಂದರೆ ಹೆರೂರು ಗ್ರಾಮದವರು. ಅವರು ಮೂಲತಹ ಹೆರೂರು ಗ್ರಾಮದವರು. ನಾಗಸಂದ್ರದ ಚಿಕ್ಕನರಸಯ್ಯನವರು ಸದರಿ ಮಲ್ಲಿಕ್ ಅಹಮ್ಮದ್ ರವರ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದರೆ ಅಂತಹ ವ್ಯಕ್ತಿ ಇರಲಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಗಳಿಗೆ ಸಂಭಂದಿಸಿದಂತೆ 33 ಗುಂಟೆ ಆಸ್ತಿಯು ಖಾತೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಸದಿಂದ ಮಾಡಿಸಿಕೊಂಡಿದ್ದಾರೆ.

ನನಗೆ ಸದರಿ ವಿಚಾರಗಳು ತಿಳಿದಿದ್ದರು ಸಹ  ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.  ಪ್ರತಿವಾದಿಗಳು ನಮಗೆ ತೊಂದರೆ ಕೊಡುತ್ತಿದ್ದಾರೆ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi